## ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1229 |
| 2 | ಸದಸ್ಯರ ಹೆಸರು | : | ಶ್ರೀ ರಿಜ್ವಾನ್ ಅರ್ಷದ್ |
| 3 | ಉತ್ತರಿಸುವ ದಿನಾಂಕ | : | 21-12-2018 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 10 ವರ್ಷಗಳಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಯಾವ ಯಾವ ಆಸ್ತಿ ಮತ್ತು ಕಟ್ಟಡಗಳನ್ನು ಅಡಮಾನ ಇರಿಸಲಾಗಿದೆ; (ಆಸ್ತಿವಾರು ವರ್ಷವಾರು ವಿವರ ಒದಗಿಸುವುದು) | ಕಳೆದ 10 ವರ್ಷಗಳಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಒಟ್ಟಾರೆ 2015-16ನೇ ಸಾಲಿನಲ್ಲಿ ವಿವಿಧ ಬ್ಯಾಂಕ್‌ಗಳಿಂದ ಪಡೆದ ಸಾಲವನ್ನು ತೀರುವಳಿ ಮಾಡಲು ಕಡಿಮೆ ಬಡ್ಡಿದರ ನೀಡಿದ ಹುಡ್ಕೋ ಸಂಸ್ಥೆಗೆ ಈ ಕೆಳಕಂಡ ಆಸ್ತಿಗಳನ್ನು ಅಡಮಾನ ಇರಿಸಲಾಗಿತ್ತು.<br>1. ಕೆಂಪೇಗೌಡ ಮ್ಯೂಸಿಯಂ<br>2. ಮೇಯೋ ಕಟ್ಟಡ<br>3. ಮಲ್ಲೇಶ್ವರಂ ಮಾರುಕಟ್ಟೆ<br>4. ಜಾನ್ಸನ್ ಮಾರುಕಟ್ಟೆ<br>5. ರಾಜಾಜಿನಗರ ಕಾಂಪ್ಲೆಕ್ಸ್<br>6. ಬಿಬಿಎಂಪಿ ಸ್ಲಾಟರ್ ಹೌಸ್<br>7. ಕೆ.ಆರ್. ಮಾರುಕಟ್ಟೆ<br>8. ದಾಸಪ್ಪ ಆಸ್ಪತ್ರೆ ಕಟ್ಟಡ<br>9. ಪಬ್ಲಿಕ್ ಯುಟಿಲಿಟಿ ಕಟ್ಟಡ<br>10. ಬಿಬಿಎಂಪಿ ಕಛೇರಿ ಕಟ್ಟಡ-ಪೂರ್ವ ವಲಯ<br>11. ಕಲಾಸಿಪಾಳ್ಯ ಮಾರುಕಟ್ಟೆ |
| ಆ) | ಆಸ್ತಿ / ಕಟ್ಟಡದ ಮಾರುಕಟ್ಟೆ ಬೆಲೆ ಎಷ್ಟು; ಕೋರಿದ ಅಡಮಾನ ಮೊತ್ತವೆಷ್ಟು; ಪಡೆಯಲಾದ ಸಾಲವೆಷ್ಟು; ಎಲ್ಲಿ ಅಡಮಾನವಿರಿಸಿದೆ; (ವಿವರ ನೀಡುವುದು) | ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಪಡೆದಿರುವ ರೂ. 871.67 ಕೋಟಿಗಳ ಸಾಲಕ್ಕೆ ಈ ಕೆಳಕಂಡ ಆಸ್ತಿಗಳ ಅಡಮಾನ ಮುಂದುವರೆಸಲಾಗಿರುತ್ತದೆ ಹಾಗೂ ಅವುಗಳ ಮಾರುಕಟ್ಟೆ ಬೆಲೆಯ ವಿವರ ಈ ಕೆಳಕಂಡಂತಿರುತ್ತದೆ. (ಕೆಳಗಿನ ಕೋಷ್ಟಕ) |

| ಕ್ರ.ಸಂ. | ಆಸ್ತಿಗಳ ವಿವರಗಳು | ಮೌಲ್ಯ (ರೂ.ಕೋಟಿಗಳಲ್ಲಿ) |
|---|---|---|
| 1. | ಕೆ.ಆರ್. ಮಾರುಕಟ್ಟೆ | 680.47 |
| 2. | ದಾಸಪ್ಪ ಆಸ್ಪತ್ರೆ ಕಟ್ಟಡ | 146.53 |
| 3. | ಪಬ್ಲಿಕ್ ಯುಟಿಲಿಟಿ ಕಟ್ಟಡ | 173.37 |
| 4. | ಬಿಬಿಎಂಪಿ ಕಛೇರಿ ಕಟ್ಟಡ ಪೂರ್ವ ವಲಯ | 128.50 |
| 5. | ಕಲಾಸಿಪಾಳ್ಯ ಮಾರುಕಟ್ಟೆ | 249.95 |
| | ಒಟ್ಟು | 1378.82 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಇ) | ಅಡಮಾನ ಇರಿಸಿದ ಆಸ್ತಿಗಳಲ್ಲಿ ಎಷ್ಟು ಸಾಲ ತೀರುವಳಿ ಮಾಡಲಾಗಿದೆ; ಯಾವ ಆಸ್ತಿಯನ್ನು ಹಿಂದಕ್ಕೆ ಪಡೆಯಲಾಗಿದೆ; (ಆಸ್ತಿವಾರು, ವರ್ಷಾವಾರು ಬಡ್ಡಿಯೊಂದಿಗೆ ಮಾಹಿತಿ ನೀಡುವುದು) | ಅಡಮಾನ ಮುಂದುವರೆಸಿದ 5 ಆಸ್ತಿಗಳ ಮೇಲೆ ರೂ. 871.67 ಕೋಟಿಗಳ ಸಾಲವನ್ನು ಪಡೆಯಲಾಗಿದ್ದು, ಪ್ರಸ್ತುತ ನವೆಂಬರ್-2018ರ ಅಂತ್ಯಕ್ಕೆ ರೂ. 219.24 ಕೋಟಿಗಳ ಅಸಲು ಮತ್ತು ರೂ. 44.37 ಕೋಟಿಗಳ ಬಡ್ಡಿಯನ್ನು ಪಾವತಿಸಲಾಗಿರುತ್ತದೆ. |

...2..

<table>
<tr><td>ಈ)</td><td>ಅಡಮಾನವಿರುವ ಕಟ್ಟಡ ಮತ್ತು ಆಸ್ತಿಯನ್ನು ಬಿಡಿಸಲು ಚಿಂತನೆ ನಡೆದಿದೆಯೇ; ಇದ್ದಲ್ಲಿ ಕ್ರಮಗಳೇನು; (ವಿವರ ನೀಡುವುದು)</td><td>2018-19ನೇ ಸಾಲಿನಲ್ಲಿ ಮರುಪಾವತಿ ಮಾಡಲಾದ ಸಾಲದ ಮೊತ್ತಕ್ಕೆ ಎದುರಾಗಿ ಒಂದು ಸ್ಥಿರಾಸ್ತಿಯನ್ನು ಹಿಂಪಡೆಯುವ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ. ಪಾಲಿಕೆಯು ವಿವಿಧ ಆದಾಯ ಮೂಲಗಳನ್ನು ಸಮರ್ಪಕವಾಗಿ ಕ್ರೋಢೀಕರಿಸಿ, ಹಂತ ಹಂತವಾಗಿ ಅಡಮಾನವಿರುವ ಆಸ್ತಿಗಳನ್ನು ಹಿಂಪಡೆಯಲು ಕ್ರಮವಹಿಸಲಾಗುತ್ತಿದೆ.</td></tr>
<tr><td>ಉ)</td><td>ಅಡಮಾನ ಇರಿಸಿದ ಆಸ್ತಿ / ಕಟ್ಟಡದಿಂದ ಬರುತ್ತಿರುವ ಮಾಹೆಯಾನ ಆದಾಯವೆಷ್ಟು? (ವಿವರ ನೀಡುವುದು)</td><td>ಅಡಮಾನ ಇರಿಸಿರುವ ಕಟ್ಟಡಗಳಿಂದ ಬರುವ ಮಾಸಿಕ ವರಮಾನ ಈ ಕೆಳಕಂಡಂತೆ ಇರುತ್ತದೆ.
<table>
<tr><th>ಕ್ರ.ಸಂ.</th><th>ವಿವರಗಳು</th><th>ಮಾಸಿಕ ವರಮಾನ (ರೂ.ಗಳಲ್ಲಿ)</th></tr>
<tr><td>1.</td><td>ಜಾನ್ಸನ್ ಮಾರುಕಟ್ಟೆ</td><td>12,446.00</td></tr>
<tr><td>2.</td><td>ಪಬ್ಲಿಕ್ ಯೂಟಿಲಿಟಿ ಬಿಲ್ಡಿಂಗ್</td><td>4,219,121.00</td></tr>
<tr><td>3.</td><td>ಕೆ.ಆರ್. ಮಾರುಕಟ್ಟೆ</td><td>12,32,708.00</td></tr>
<tr><td>4.</td><td>ರಾಜಾಜಿನಗರ ವಾಣಿಜ್ಯ ಸಂಕೀರ್ಣ</td><td>87,132.00</td></tr>
<tr><td>5.</td><td>ಮಲ್ಲೇಶ್ವರಂ ಮಾರುಕಟ್ಟೆ</td><td>28,520.00</td></tr>
<tr><td>6.</td><td>ಕಲಾಸಿಪಾಳ್ಯ ಮಾರುಕಟ್ಟೆ</td><td>10,02,129.00</td></tr>
<tr><td colspan="2">ಒಟ್ಟು</td><td>65,82,056.00</td></tr>
</table></td></tr>
</table>

**ಸಂಖ್ಯೆ: ನಅಇ 610 ಎಂಎನ್‌ಜಿ 2018**

**(ಜಿ. ಪರಮೇಶ್ವರ)**
ಉಪ ಮುಖ್ಯಮಂತ್ರಿಗಳು